## ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಡ್ಯ ವಿಭಾಗ, ಮಂಡ್ಯ

**ಸಂಖ್ಯೆ:ಬಿಯುಡಿ/ಇ.ಕಾ/ಸಿಆರ್–24/19–20 ದಿ:19–06–2019 (2ನೇ ಕರೆ)**

### " ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ " (ದ್ವಿ–ಲಕೋಟೆ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಅನುಸೂಚಿಯಲ್ಲಿ ನಮೂದಿಸಿರುವ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು 2019–20ನೇ ಸಾಲಿನಲ್ಲಿ ನಿರ್ವಹಿಸಲು ಈ ವಿಭಾಗದಲ್ಲಿ ನೋಂದಾಯಿಸಿಕೊಂಡಿರುವ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 2ನೇ ಕರೆ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ 35 ಕಾಮಗಾರಿಗಳ ಪೈಕಿ ಗರಿಷ್ಟ ಟೆಂಡರ್ ಮೊತ್ತವು **ರೂ.6.665** ಲಕ್ಷ ಹಾಗೂ ಕನಿಷ್ಟ ಮೊತ್ತವು ರೂ.**0.70220** ಲಕ್ಷ ಆಗಿದ್ದು, ಇಎಂಡಿ ಮೊತ್ತವು ಕ್ರಮವಾಗಿ ಗರಿಷ್ಠ **ರೂ.0.16670 ಲಕ್ಷ** ಹಾಗೂ ಕನಿಷ್ಠ **ರೂ.0.01760 ಲಕ್ಷ** ಆಗಿರುತ್ತದೆ. ಟೆಂಡರನ್ನು **ದಿ:01–07–2019**ರಂದು ಅಪರಾಹ್ನ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:03–07–2019**ರ ಅಪರಾಹ್ನ 04.30 ಗಂಟೆ ಹಾಗೂ ಆರ್ಥಿಕ ಬಿಡ್ **ದಿನಾಂಕ:04–07–2019**ರಂದು ಅಪರಾಹ್ನ 5.00 ಗಂಟೆಗೆ ತೆರೆಯಲಾಗುವುದು. ಟೆಂಡರ್‌ಗಳನ್ನು ಮೇಲ್ಕಂಡಂತೆ ನಿಗಧಿತ ದಿನಾಂಕ ಹಾಗೂ ಸಮಯದಂದು ಹಾಜರಿರುವ ಟೆಂಡರ್‌ದಾರರ (ಅರಣ್ಯ ಗುತ್ತಿಗೆದಾರರ) ಸಮಕ್ಷಮ ಈ ಕೆಳಗೆ ಸಹಿ ಮಾಡಿರುವ ಅಥವಾ ಅವರಿಂದ ಪ್ರಾಧೀಕೃತಗೊಂಡ ಅಧಿಕಾರಿಗಳಿಂದ ತೆರೆದು ಓದಲಾಗುವುದು. ಟೆಂಡರ್ ದಿನಾಂಕವು ಸಾರ್ವತ್ರಿಕ ರಜೆ ಎಂದು ಘೋಷಿತವಾದಲ್ಲಿ ಮರುದಿನ ಟೆಂಡರನ್ನು ಸ್ವೀಕರಿಸಿ ಅದೇ ಸಮಯಕ್ಕೆ ತೆರೆಯಲಾಗುವುದು. ಕೆಲಸದ ವಿವರ, ಪರಿಮಾಣ, ಇಎಂಡಿ ಇತರೇ ಮಾಹಿತಿ ಬೇಕಾದಲ್ಲಿ ಮೇಲ್ಕಂಡ ಕಛೇರಿಯಿಂದ ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://www.eproc.karnataka.gov.in ರಲ್ಲಿ ಪಡೆಯಬಹುದು.

ಅ] **ಸಸಿಗಳನ್ನು ಬೆಳೆಸುವುದು –**ಸಸಿಗಳಿಗೆ ನೀರು ಹಾಕುವುದು, ಕಳೆ ತೆಗೆಯುವುದು, ಸ್ಥಳಾಂತರಿಸಿ ಎತ್ತರವಾರು ಜೋಡಿಸುವುದು, ಔಷಧಿ ಸಿಂಪಡಿಸುವುದು.

**ಮೇಲ್ಕಂಡ ಋತುಮಾನದ ಕೆಲಸಗಳನ್ನು ಪ್ಯಾಕೇಜ್ ಆಫ್ ಪ್ರಾಕ್ಟೀಸ್ ಪ್ರಕಾರ ತಾಂತ್ರಿಕ ಸಲಹೆಗನುಗುಣವಾಗಿ ನಿರ್ವಹಿಸುವುದು.**

**2019–20ನೇ ಸಾಲಿಗೆ ವಿವಿಧ ಶೀರ್ಷಿಕೆಗಳಡಿ ನಿರ್ವಹಿಸಬೇಕಾದ ಕಾಮಗಾರಿಗಳ ವಿವರ**

| ಕ್ರ ಸಂ | ವಲಯ | ಸ್ಥಳದ ವಿವರ | ವಿಸ್ತೀರ್ಣ (ಹೆಕ್ಟೇರ್/ಕಿ.ಮೀನಲ್ಲಿ) ಸಸಿ (ಸಂಖ್ಯೆಯಲ್ಲಿ) | ಕಾಮಗಾರಿಯ ಅಂದಾಜು ವೆಚ್ಚ (ರೂ.ಗಳಲ್ಲಿ) | ಕಾಮಗಾರಿಯ ವಿವರ | ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ | ಟೆಂಡರ್‌ಗಿಟ್ಟ ಮೊತ್ತ (ಪಾಲೀಥೀನ್ ಚೀಲದ ದರವನ್ನು ಹೊರತುಪಡಿಸಿ | ಇಡಬೇಕಾದ ಇಎಂಡಿ ಮೊಬಲಗು (ಡಿ.ಡಿ ರೂಪದಲ್ಲಿ ರೂಗಳಲ್ಲಿ) |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| **2406–01–101–2–83–139 ಪ್ರ.ಕಾ ಸಾರ್ವಜನಿಕರ ವಿತರಣೆಗಾಗಿ ಸಸಿ ಬೆಳೆಸುವುದು** | | | | | | | | |
| 1 | ಮಂಡ್ಯ | ಇಂಡುವಾಳು ಸಸ್ಯಕ್ಷೇತ್ರ | 40000 | 267400.00 | 6*9 ಅಳತೆಯ ಸಸಿಗಳನ್ನು ಬೆಳೆಸುವುದು | 3/31/2020 | 221400.00 | 5550.00 |
| 2 | ಮದ್ದೂರು | ಸೋಮನಹಳ್ಳಿ ಸಸ್ಯಕ್ಷೇತ್ರ | 40000 | 267400.00 | | 3/31/2020 | 221400.00 | 5550.00 |
| 3 | ಶ್ರೀರಂಗಪಟ್ಟಣ | ಕೆ.ಶೆಟ್ಟಿಹಳ್ಳಿ ಸಸ್ಯಕ್ಷೇತ್ರ | 40000 | 267400.00 | | 3/31/2020 | 221400.00 | 5550.00 |
| 4 | ಮಳವಳ್ಳಿ | ಜವನಹಳ್ಳಿ ಸಸ್ಯಕ್ಷೇತ್ರ | 40000 | 267400.00 | | 3/31/2020 | 221400.00 | 5550.00 |
| 5 | ನಾಗಮಂಗಲ | ಕಾಚೇನಹಳ್ಳಿ ಸಸ್ಯಕ್ಷೇತ್ರ | 40000 | 267400.00 | | 3/31/2020 | 221400.00 | 5550.00 |
| 6 | ಪಾಂಡವಪುರ | ಎಲೆಕೆರೆ ಸಸ್ಯಕ್ಷೇತ್ರ | 40000 | 267400.00 | | 3/31/2020 | 221400.00 | 5550.00 |
| 7 | ಕೆ.ಆರ್.ಪೇಟೆ | ಹೇಮಗಿರಿ ಸಸ್ಯಕ್ಷೇತ್ರ | 40000 | 267400.00 | | 3/31/2020 | 221400.00 | 5550.00 |
| **Total** | | | **280000** | **1871800.00** | | | | |

| ಕ್ರ ಸಂ | ವಲಯ | ಸ್ಥಳದ ವಿವರ | ವಿಸ್ತೀರ್ಣ (ಹೆಕ್ಟೇರ್/ಕಿ.ಮೀನಲ್ಲಿ) ಸಸಿ (ಸಂಖ್ಯೆಯಲ್ಲಿ) | ಕಾಮಗಾರಿಯ ಅಂದಾಜು ವೆಚ್ಚ (ರೂ.ಗಳಲ್ಲಿ) | ಕಾಮಗಾರಿಯ ವಿವರ | ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ | ಟೆಂಡರ್‌ಗಿಟ್ಟ ಮೊತ್ತ (ಪಾಲೀಥೀನ್ ಚೀಲದ ದರವನ್ನು ಹೊರತುಪಡಿಸಿ | ಇಡಬೇಕಾದ ಇಎಂಡಿ ಮೊಬಲಗು (ಡಿ.ಡಿ ರೂಪದಲ್ಲಿ ರೂಗಳಲ್ಲಿ) |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 2406–01–101–2–83–139 ಪ್ರ.ಕಾ ಸಾರ್ವಜನಿಕರ ವಿತರಣೆಗಾಗಿ ಸಸಿ ಬೆಳೆಸುವುದು | | | | | | | | |
| 8 | ಮಂಡ್ಯ | ಇಂಡುವಾಳು ಸಸ್ಯಕ್ಷೇತ್ರ | 50000 | 882000.00 | 8*12 ಅಳತೆಯ ಸಸಿಗಳನ್ನು ಬೆಳೆಸುವುದು | 3/31/2020 | 666500.00 | 16670.00 |
| 9 | ಮದ್ದೂರು | ಸೋಮನಹಳ್ಳಿ ಸಸ್ಯಕ್ಷೇತ್ರ | 50000 | 882000.00 | | 3/31/2020 | 666500.00 | 16670.00 |
| 10 | ಶ್ರೀರಂಗಪಟ್ಟಣ | ಕೆ.ಶೆಟ್ಟಿಹಳ್ಳಿ ಸಸ್ಯಕ್ಷೇತ್ರ | 50000 | 882000.00 | | 3/31/2020 | 666500.00 | 16670.00 |
| 11 | ಮಳವಳ್ಳಿ | ಜವನಹಳ್ಳಿ ಸಸ್ಯಕ್ಷೇತ್ರ | 50000 | 882000.00 | | 3/31/2020 | 666500.00 | 16670.00 |
| 12 | ನಾಗಮಂಗಲ | ಕಾಚೇನಹಳ್ಳಿ ಸಸ್ಯಕ್ಷೇತ್ರ | 50000 | 882000.00 | | 3/31/2020 | 666500.00 | 16670.00 |
| 13 | ಪಾಂಡವಪುರ | ಎಲೆಕೆರೆ ಸಸ್ಯಕ್ಷೇತ್ರ | 50000 | 882000.00 | | 3/31/2020 | 666500.00 | 16670.00 |
| 14 | ಕೆ.ಆರ್.ಪೇಟೆ | ಹೇಮಗಿರಿ ಸಸ್ಯಕ್ಷೇತ್ರ | 50000 | 882000.00 | | 3/31/2020 | 666500.00 | 16670.00 |
| **Total** | | | **350000** | **6174000.00** | | | | **116690.00** |
| 2406–01–102–01–ಕೆಎಫ್‌ಡಿಎಫ್–03–ಇತರೆ ನೆಡುತೋಪು–139 ಪ್ರ.ಕಾ | | | | | | | | |
| 15 | ಮಂಡ್ಯ | ಇಂಡುವಾಳು ಸಸ್ಯಕ್ಷೇತ್ರ | 2000 | 81400.00 | 10*16 ಅಳತೆಯ ಸಸಿಗಳನ್ನು ಬೆಳೆಸುವುದು | 3/31/2020 | 70220.00 | 1760.00 |
| 16 | ಮದ್ದೂರು | ಸೋಮನಹಳ್ಳಿ ಸಸ್ಯಕ್ಷೇತ್ರ | 2000 | 81400.00 | | 3/31/2020 | 70220.00 | 1760.00 |
| 17 | ಶ್ರೀರಂಗಪಟ್ಟಣ | ಕೆ.ಶೆಟ್ಟಿಹಳ್ಳಿ ಸಸ್ಯಕ್ಷೇತ್ರ | 2000 | 81400.00 | | 3/31/2020 | 70220.00 | 1760.00 |
| 18 | ಮಳವಳ್ಳಿ | ಜವನಹಳ್ಳಿ ಸಸ್ಯಕ್ಷೇತ್ರ | 2000 | 81400.00 | | 3/31/2020 | 70220.00 | 1760.00 |
| 19 | ನಾಗಮಂಗಲ | ಕಾಚೇನಹಳ್ಳಿ ಸಸ್ಯಕ್ಷೇತ್ರ | 2000 | 81400.00 | | 3/31/2020 | 70220.00 | 1760.00 |
| 20 | ಪಾಂಡವಪುರ | ಎಲೆಕೆರೆ ಸಸ್ಯಕ್ಷೇತ್ರ | 2000 | 81400.00 | | 3/31/2020 | 70220.00 | 1760.00 |
| 21 | ಕೆ.ಆರ್.ಪೇಟೆ | ಹೇಮಗಿರಿ ಸಸ್ಯಕ್ಷೇತ್ರ | 2000 | 81400.00 | | 3/31/2020 | 70220.00 | 1760.00 |
| **Total** | | | **14000** | **569800.00** | | | | |
| 2406–01–102–01–ಕೆಎಫ್‌ಡಿಎಫ್–03–ಇತರೆ ನೆಡುತೋಪು–139 ಪ್ರ.ಕಾ | | | | | | | | |
| 22 | ಮಂಡ್ಯ | ಇಂಡುವಾಳು ಸಸ್ಯಕ್ಷೇತ್ರ | 2000 | 507800.00 | 25*25 ಅಳತೆಯ ಸಸಿಗಳನ್ನು ಬೆಳೆಸುವುದು | 3/31/2020 | 439200.00 | 10990.00 |
| 23 | ಮದ್ದೂರು | ಸೋಮನಹಳ್ಳಿ ಸಸ್ಯಕ್ಷೇತ್ರ | 2000 | 507800.00 | | 3/31/2020 | 439200.00 | 10990.00 |
| 24 | ಶ್ರೀರಂಗಪಟ್ಟಣ | ಕೆ.ಶೆಟ್ಟಿಹಳ್ಳಿ ಸಸ್ಯಕ್ಷೇತ್ರ | 2000 | 507800.00 | | 3/31/2020 | 439200.00 | 10990.00 |
| 25 | ಮಳವಳ್ಳಿ | ಜವನಹಳ್ಳಿ ಸಸ್ಯಕ್ಷೇತ್ರ | 2000 | 507800.00 | | 3/31/2020 | 439200.00 | 10990.00 |
| 26 | ನಾಗಮಂಗಲ | ಕಾಚೇನಹಳ್ಳಿ ಸಸ್ಯಕ್ಷೇತ್ರ | 2000 | 507800.00 | | 3/31/2020 | 439200.00 | 10990.00 |
| 27 | ಪಾಂಡವಪುರ | ಎಲೆಕೆರೆ ಸಸ್ಯಕ್ಷೇತ್ರ | 2000 | 507800.00 | | 3/31/2020 | 439200.00 | 10990.00 |
| 28 | ಕೆ.ಆರ್.ಪೇಟೆ | ಹೇಮಗಿರಿ ಸಸ್ಯಕ್ಷೇತ್ರ | 2000 | 507800.00 | | 3/31/2020 | 439200.00 | 10990.00 |
| **Total** | | | **14000** | **3554600.00** | | | | |

| | | | | | | | | |
|---|---|---|---|---|---|---|---|---|
| 29 | ಮಂಡ್ಯ | ಇಂಡುವಾಳು ಸಸ್ಯಕ್ಷೇತ್ರ | 2000 | 128980.00 | 14*20 ಅಳತೆಯ ಸಸಿಗಳನ್ನು ಬೆಳೆಸುವುದು | 3/31/2020 | 109280.00 | 2740.00 |
| 30 | ಮದ್ದೂರು | ಸೋಮನಹಳ್ಳಿ ಸಸ್ಯಕ್ಷೇತ್ರ | 2000 | 128980.00 | | 3/31/2020 | 109280.00 | 2740.00 |
| 31 | ಶ್ರೀರಂಗಪಟ್ಟಣ | ಕೆ.ಶೆಟ್ಟಿಹಳ್ಳಿ ಸಸ್ಯಕ್ಷೇತ್ರ | 2000 | 128980.00 | | 3/31/2020 | 109280.00 | 2740.00 |
| 32 | ಮಳವಳ್ಳಿ | ಜವನಹಳ್ಳಿ ಸಸ್ಯಕ್ಷೇತ್ರ | 2000 | 128980.00 | | 3/31/2020 | 109280.00 | 2740.00 |
| 33 | ನಾಗಮಂಗಲ | ಕಾಚೇನಹಳ್ಳಿ ಸಸ್ಯಕ್ಷೇತ್ರ | 2000 | 128980.00 | | 3/31/2020 | 109280.00 | 2740.00 |
| 34 | ಪಾಂಡವಪುರ | ಎಲೆಕೆರೆ ಸಸ್ಯಕ್ಷೇತ್ರ | 2000 | 128980.00 | | 3/31/2020 | 109280.00 | 2740.00 |
| 35 | ಕೆ.ಆರ್.ಪೇಟೆ | ಹೇಮಗಿರಿ ಸಸ್ಯಕ್ಷೇತ್ರ | 2000 | 128980.00 | | 3/31/2020 | 109280.00 | 2740.00 |
| **Total** | | | **14000** | **902860.00** | | | | |

## " ಷರತ್ತುಗಳು "

1 ತಾಂತ್ರಿಕ ಬಿಡ್ ಸಲ್ಲಿಸುವವರು ಕೆಳಗೆ ನಮೂದಿಸಿದ ದಾಖಲಾತಿಗಳನ್ನು ತಪ್ಪದೆ ಅಪಲೋಡ್ ಮಾಡಬೇಕು.

ಎ) 2019–20ನೇ ಸಾಲಿನಲ್ಲಿ ಈ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರೆಂದು ನೊಂದಾಯಿಸಿದ ಪ್ರಮಾಣ ಪತ್ರದ ಪ್ರತಿ.

ಬಿ) ಗುತ್ತಿಗೆದಾರರು ಈ ಹಿಂದೆ ಇದೇ ರೀತಿಯ ಅರಣ್ಯೀಕರಣ ಕಾಮಗಾರಿಗಳನ್ನು ಕನಿಷ್ಟ 5 (ಐದು) ವರ್ಷ ಸಸಿಗಳನ್ನು ಬೆಳೆಸುವ / ನಿರ್ವಹಣೆ ಮಾಡುವ ಹಾಗೂ ಮಾನ್ಸೂನ್ ನೆಡುತೋಪು ಬೆಳೆಸಿ ನಿರ್ವಹಣೆ ಕಾಮಗಾರಿಗಳನ್ನು ಕೈಗೊಂಡಿರುವ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಥವಾ ಮೇಲ್ಪಟ್ಟ ಅಧಿಕಾರಿಗಳಿಂದ ಪಡೆದ ಅನುಭವ ಧೃಡೀಕರಣ ಪತ್ರ ಲಗತ್ತಿಸಿರಬೇಕು. (ಇದೇ ರೀತಿಯ ಅರಣ್ಯೀಕರಣ ಕಾಮಗಾರಿಗಳನ್ನು ಟೆಂಡರ್ ಮೊತ್ತದ ಕನಿಷ್ಠ ಶೇಕಡ 50% ರಷ್ಟು ಮೊತ್ತಕ್ಕೆ ಕಾಮಗಾರಿ ದೃಢೀಕರಣ ಪತ್ರ ಲಗತ್ತಿಸಬೇಕು)

ಸಿ) ಚಾಲ್ತಿಯಲ್ಲಿರುವ ಆದಾಯ ತೀರಿಕೆ ಪತ್ರದ ಧೃಢೀಕೃತ ಪತ್ರ **(Present Income Tax Clearance certified copy)**

ಡಿ) ಇದೇ ರೀತಿಯ ಅರಣ್ಯೀಕರಣ ಕಾಮಗಾರಿಗಳನ್ನು ನಿರ್ವಹಿಸಿದ್ದಕ್ಕೆ ಆರ್ಥಿಕ ಚಲಾವಣೆ ಮಾಡಿದ ಸಾಮರ್ಥ್ಯವನ್ನು ದೃಢೀಕರಿಸುವ ದಾಖಲಾತಿಗಳ ಪ್ರತಿಗಳು **(Financial Turnover capability) They should be achieved in at least two financial years, a minimum annual financial turnover i.e., usually not less than two times the estimated amount under the contract.**

ಇ) ಟೆಂಡರ್ ಕೆಲಸದ ಅವಧಿ ಮುಗಿಯುವವರೆಗೆ ಚಾಲ್ತಿಯಲ್ಲಿರುವ ಸಾಲ ತೀರುವಳಿ ಶಕ್ತಿಪತ್ರವನ್ನು ಕಂದಾಯ ಇಲಾಖೆ ಅಥವಾ ರಾಷ್ಟ್ರೀಕೃತ ಬ್ಯಾಂಕಿನಿಂದ ಪ್ರತಿ ಕೆಲಸದ ಶೇಕಡ 30ರಷ್ಟು ಮೊತ್ತಕ್ಕೆ ಪಡೆದು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಬೇಕು.

ಎಫ್) ಕಾರ್ಮಿಕ ಇಲಾಖೆಯಲ್ಲಿ ಇಪಿಎಫ್, ಇಎಸ್‌ಐ ನೋಂದಾಯಿಸಿದ ಬಗ್ಗೆ ದೃಢೀಕೃತ ಪತ್ರಗಳು, ನೋಂದಾಯಿತ ಕಾರ್ಮಿಕರ ಪಟ್ಟಿ ಹಾಗೂ ನೊಂದಾಯಿತ ಕಾರ್ಮಿಕರಿಗೆ ಇಪಿಎಫ್ ಮತ್ತು ಇಎಸ್‌ಐ

2) ತಾಂತ್ರಿಕ ಬಿಡ್ ಜೊತೆಗೆ ನಿಗಧಿಪಡಿಸಲಾದ ದಾಖಲಾತಿಗಳನ್ನು ಅಪಲೋಡ್ ಮಾಡದಿದ್ದರೆ ಅಂತಹವುಗಳನ್ನು ತಿರಸ್ಕರಿಸಲಾಗುವುದು.

ಇಲಾಖಾ ಮೂಲಕ ಸರಬರಾಜು ಮಾಡುವ ಚೀಲಗಳಲ್ಲಿ ಸಸಿಗಳನ್ನು ಬೆಳೆಸುವುದು

3) ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ., ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಸಸಿಗಳನ್ನು ಬೆಳೆಸಲು ಆಯ್ಕೆಮಾಡಿದ ಸ್ಥಳ/ಭೂಮಿಯು ಟೆಂಡರ್‌ದಾರರ ಹೆಸರಿನಲ್ಲಿ ಇರಬೇಕು ಅಥವಾ ಸದರಿ ಸ್ಥಳವನ್ನು ಮಾರ್ಚ–2020ರ ಮಾಹೆಯವರೆಗೆ ಉಪಯೋಗಿಸುವದಾಗಿ ಸಂಬಂದಿಸಿದ ಭೂಮಿಯ ಮಾಲೀಕರಿಂದ ಕಾನೂನು ರೀತ್ಯ ಒಪ್ಪಂದ ಮಾಡಿಕೊಂಡಿರಬೇಕು. ಮತ್ತು ಸೂಕ್ತ ನೀರಿನ ವ್ಯವಸ್ಥೆ ಹಾಗೂ ಭದ್ರತೆ ಇರಬೇಕು ಹಾಗೂ ವಲಯಗಳ ವ್ಯಾಪ್ತಿಯ ಸ್ಥಳಕ್ಕೆ ಆದಷ್ಟು ಸಮೀಪದಲ್ಲಿರಬೇಕು. ಗುತ್ತಿಗೆದಾರರು ಸಸಿಗಳನ್ನು ಬೆಳೆಸುವಾಗ ಸಂಬಂಧಿಸಿದ ವಲಯ ಅರಣ್ಯಾಧಿಕಾರಿಗಳು / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ನಿರ್ದೇಶನ ಹಾಗೂ ಸಲಹೆಯಂತೆ/ ಮಾದರಿ ಡಾಟಾಸೀಟ್‌ನಂತೆ, ವಲಯ ಅರಣ್ಯಾಧಿಕಾರಿಗಳು ಬೆಳೆಸಲು ತಿಳಿಸುವ ಜಾತಿಯ ಸಸಿಗಳು 8"x12", 6x9" 14*20 "25"*25" ಅಳತೆಯ ಚೀಲಗಳಲ್ಲಿ ಹೊಂಗೆ, ತಪಸಿ, ಸೀತಾಫಲ, ಸೀಮಾರೂಬ, ಕಮರ, ಮುತ್ತಗ, ಕರಿಜಾಲಿ, ಬನ್ನಿ, ಶ್ರೀಗಂಧ, ಬಾರೆ, ಗೇರು, ಕಾಡುಗೇರು, ಬಾಗೆ, ಹಾಲೆ, ನೆಲ್ಲಿ, ಹಲಸು, ಹೊನ್ನೆ ಇತ್ಯಾದಿ ಸಸಿಗಳನ್ನು ನೆಟ್ಟು ಬೆಳೆಸಬೇಕಾಗುತ್ತದೆ.

4) ಸಸಿಗಳನ್ನು ಬೆಳೆಸಲು ಬೇಕಾಗುವ ಪಾಲಿಥಿನ್ ಚೀಲಗಳನ್ನು ಇಲಾಖೆಯ ಮುಖಾಂತರ ರಾಜ್ಯ ಮಟ್ಟದಲ್ಲಿ ಟೆಂಡರ್ ಕರೆದ ಪ್ರಕಾರ ಈಗಾಗಲೇ ಖರೀದಿಸಲಾಗಿದ್ದು, ಸದರಿ ಪಾಲಿಥೀನ್ ಚೀಲಗಳನ್ನು ಇಲಾಖೆಯಿಂದ ಪೂರೈಸಲಾಗುವುದು.

5) ಪಾಲಿಥಿನ್ ಚೀಲಗಳಲ್ಲಿ ಅಂದಾಜು ಪಟ್ಟಿಯಲ್ಲಿ ಮಂಜೂರಿಯಾದ ಪ್ರಕಾರ ನಿರ್ದಿಷ್ಟ ಪ್ರಮಾಣದ ಮಿಶ್ರಣಗಳನ್ನು ನಿಯಮಾನುಸಾರ ಬೆಳೆಸುವುದು ಹಾಗೂ ಸದರಿ ಮಿಶ್ರಣದ ಗುಣಮಟ್ಟವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ದೃಡೀಕರಣ ಪಡೆದುಕೊಳ್ಳುವುದು ಹಾಗೂ ಅನಾವಶ್ಯಕವಾಗಿ ಯಾವುದೇ ರಸಾಯನಿಕ ಗೊಬ್ಬರವನ್ನು ಸಸಿಗಳಿಗೆ ಹಾಕಬಾರದು.

6) ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಋತುಮಾನಕ್ಕನುಗುಣವಾಗಿ ಕೈಗೊಳ್ಳಬೇಕಾಗಿರುವುದರಿಂದ ವಿವಿಧ ಅಳತೆ ಸಸಿಗಳನ್ನು ನಿಗದಿಪಡಿಸಿದ ಮಾಹೆಯಲ್ಲಿಯೇ ಬೆಳೆಸಬೇಕಾಗುವುದರಿಂದ, ಟೆಂಡರ್ ಮತ್ತು ಕರಾರು ಪ್ರಕ್ರಿಯೆ ವಿಳಂಬವಾದಲ್ಲಿ ಇಲಾಖೆ ಮುಖಾಂತರ ಸಸಿಗಳನ್ನು ಬೆಳೆಸಲು ಕ್ರಮ ಜರುಗಿಸಲಾಗುವುದು. ಅದಕ್ಕೆ ತಗುಲಿದ ವೆಚ್ಚವನ್ನು ಟೆಂಡರ್ ಮೊತ್ತದಿಂದ ಕಡಿತಗೊಳಿಸಿ ನೀಡಲಾಗುವುದು. ಸದರಿ ಅಂಶವನ್ನು ಗಮನದಲ್ಲಿಟ್ಟುಕೊಂಡು ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು.

7) ನಿಗಧಿತ ಪ್ರಮಾಣಕ್ಕಿಂತ ಕಡಿಮೆ ಸಸಿಗಳನ್ನು ಬೆಳೆಸಿದರೆ, ಸಸಿಗಳನ್ನು ಬೆಳೆಸಲು ಭರಿಸಿದ ಹಣವನ್ನು ಪಾವತಿಸುವುದಿಲ್ಲ ಮತ್ತು ಕಡಿಮೆ ಪ್ರಮಾಣ ಬೆಳೆಸಿದ ಸಸಿಗಳ ಪಾಲಿಥೀನ್ ಚೀಲಗಳ ಕ್ರಯವನ್ನು ಹಾಗೂ ಸದರಿ ಸಸಿಗಳನ್ನು ನೆಡಲು ತೆಗೆದಿರುವ ಗುಂಡಿಗಳ ಕ್ರಯವನ್ನು ಸಹ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

8) ಮೇಲಾಧಿಕಾರಿಗಳು ಸಸಿಗಳನ್ನು ತಪಾಸಣೆ ಮಾಡಲು ಬರುವಂತೆ ಹಾಗೂ ಸಸಿಗಳ ಸಾಗಾಣಿಕೆಗೆ ಅನುಕೂಲವಾಗುವಂತೆ ಸಸಿಗಳನ್ನು ಬೆಳೆಸಿದ ಸ್ಥಳಕ್ಕೆ ವಾಹನವನ್ನು ತೆಗೆದುಕೊಂಡು ಹೋಗಲು ರಸ್ತೆಯ ಸಂಪರ್ಕ ಹೊಂದಿರಬೇಕು.

9) ಟೆಂಡರ್ ಪ್ರಕಟಣೆಯ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆದು ಕೆಲಸ ಮಾಡಿಸುವ, ಯಾವುದೇ ಕಾರಣವನ್ನು ನೀಡದೆ ಟೆಂಡರನ್ನು ರದ್ದು ಪಡಿಸುವ ಅಧಿಕಾರವು ಈ ಕೆಳ

**ಮಾನ್ಸೂನ್ ನೆಡುತೋಪು ಬೆಳೆಸುವುದು / ನಿರ್ವಹಣೆ ಮಾಡುವುದು / ಸಸಿಗಳ ನಿರ್ವಹಣೆ ಮಾಡುವುದು**

10) ಟೆಂಡರುದಾರರು ಆದಾಯ ತೆರಿಗೆ, ಜಿಎಸ್‌ಟಿ, ವೃತ್ತಿ ತೆರಿಗೆ ಹಾಗೂ ತೀರುವಳಿ ಪತ್ರಗಳನ್ನು ಸಂಬಂದಿಸಿದ ಇಲಾಖೆಗಳಿಂದ ಪಡೆದು ಟೆಂಡರಿನ ಜೊತೆಯಲ್ಲಿ ಲಗತ್ತಿಸಿರಬೇಕು.

11) ಟೆಂಡರ್‌ದಾರರು ತಮ್ಮ ದರವನ್ನು ನಮೂದಿಸುವಾಗ ಪ್ರತಿ ಕಾಮಗಾರಿಗೆ ಇಲಾಖಾ ದರದ ಮೇಲೆ ಶೇಕಡವಾರು ಇಷ್ಟು ಹೆಚ್ಚು, ಕಡಿಮೆ ಅಥವಾ ಎಸ್‌ಎಸ್‌ಆರ್ ದರಕ್ಕನುಗುಣವಾಗಿ ಎಂದು ದರವನ್ನು ಸ್ಪಷ್ಟವಾಗಿ ಅಂಕಿ ಮತ್ತು ಅಕ್ಷರಗಳಲ್ಲಿ ನಮೂದಿಸಬೇಕು.

12) ಟೆಂಡರ್‌ದಾರರು ಎಸ್.ಎಸ್.ಆರ್.ಗಿಂತ ಕಡಿಮೆ ದರವನ್ನು ಬಿಡ್ಡಿಂಗ್ ಮಾಡಿದಲ್ಲಿ ವ್ಯತ್ಯಾಸದ ಹಣವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮಂಡ್ಯ ಇವರ ಹೆಸರಿನಲ್ಲಿ ಡಿಡಿ ಅಥವಾ ಟಿಡಿಆರ್ ಮಾದರಿಯಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳುವ ಮುನ್ನ ಠೇವಣಿ ಇಡುವುದು. ಈ ಸಂಬಂಧ ಯಾವುದೇ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ. ಟೆಂಡರು ರೀತ್ಯಾ ವಹಿಸಿದ ಕೆಲಸವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಠೇವಣಿ ಹಣವನ್ನು ನಿಯಮಾನುಸಾರ ಹಿಂದಿರುಗಿಸಲಾಗುವುದು.

13) ಈ ವಿಷಯದಲ್ಲಿ ಅಂತಿಮವಾಗಿ ಯಾವುದೇ ತಿದ್ದುಪಡಿಯನ್ನು ಮಾಡುವ, ನಿಯಮ ನಿಬಂಧನೆ ಸೇರಿಸುವ ಅಧಿಕಾರ ಈ ಕೆಳಸಹಿದಾರರಿಗಿರುತ್ತದೆ. ಗುತ್ತಿಗೆದಾರರು ಇದಕ್ಕೆ ಬದ್ಧರಾಗಿರಬೇಕು.

14) ಅಪ್ರಾಪ್ತ ವಯಸ್ಕರು ಮತ್ತು ಕಾನೂನಿನನ್ವಯ ಅನರ್ಹರೆಂದು ತೀರ್ಮಾನಿಸಲ್ಪಟ್ಟ ವ್ಯಕ್ತಿಗಳಿಂದ ಟೆಂಡರ್‌ನ್ನು ಸ್ವೀಕರಿಸಲಾಗುವುದಿಲ್ಲ. ಒಂದು ವೇಳೆ ಇಲಾಖೆಗೆ ತಿಳಿಸದಂತೆ ಸದರಿ ವ್ಯಕ್ತಿಗಳು ಟೆಂಡರ್ ಹಾಕಿ ನಂತರ ಅದು ತಿಳಿದಲ್ಲಿ ಅಂತಹವರ ಗುತ್ತಿಗೆಯನ್ನು ಅನೂರ್ಜಿತಗೊಳಿಸಲಾಗುವುದು ಮತ್ತು ಅವರು ಇಲಾಖೆಯಲ್ಲಿ ಇಟ್ಟಿರುವ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

15) ಮೇಲ್ಕಂಡ ಕಾಮಗಾರಿಗಳಿಗೆ ಯಾವುದೇ ಮುಂಗಡ ಹಣವನ್ನು ಪಾವತಿ ಮಾಡಲಾಗುವುದಿಲ್ಲ. ಕೆಲಸಗಳನ್ನು ಆಯಾಯ ವಲಯಕ್ಕೆ ಸಂಬಂಧಿಸಿದಂತೆ ವಲಯ ಅರಣ್ಯಾಧಿಕಾರಿಗಳಿಂದ ಮತ್ತು ಸಂಬಂದಪಟ್ಟ ಉಪ–ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಪರಿಶೀಲನೆ ಹಾಗೂ ದೃಢೀಕರಣವನ್ನು ಅನುಸರಿಸಿ ಬಿಲ್ಲನ್ನು ಪಾವತಿ ಮಾಡಲಾಗುವುದು ಹಾಗೂ ಪಾವತಿಸುವ ಹಣದ ಮೇಲೆ ಚಾಲ್ತಿಯಲ್ಲಿರುವ ತೆರಿಗೆಗಳನ್ನು ಕಡಿತ ಮಾಡಲಾಗುವುದು. ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ಹಣ ಪಾವತಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.

16) ಯಶಸ್ವಿ ಟೆಂಡರ್‌ದಾರರು ಆದೇಶ ಕೊಟ್ಟ 7 ದಿವಸಗಳೊಳಗಾಗಿ ಸರ್ಕಾರ ನಿಗಧಿಪಡಿಸಿದ ಮೊತ್ತಕ್ಕೆ ಛಾಪಾ ಕಾಗದದಲ್ಲಿ ಮಂಡ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಸಮಕ್ಷಮ ಕರಾರು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

17) ಯಶಸ್ವಿ ಬಿಡ್ಡುದಾರರು ಟೆಂಡರ್ ಮೊತ್ತಕ್ಕೆ ಶೇಕಡ 5ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಡಿಡಿ / ಟಿಡಿಆರ್ ರೂಪದಲ್ಲಿ ಕರಾರು ಮಾಡಿಕೊಳ್ಳುವ ಸಮಯದಲ್ಲಿ ಸಲ್ಲಿಸುವುದು

**18) ಅರಣ್ಯ ಇಲಾಖೆ ಕಾಮಗಾರಿಗಳು ಮಳೆಯಾಧಾರಿತ ಹಾಗೂ ಋತುಮಾನದ ಕೆಲಸಗಳಾಗಿರುವುದರಿಂದ ಮಳೆ ಬಿದ್ದ ಕೂಡಲೇ ಸಸಿಗಳನ್ನು ನೆಡುವ ಕೆಲಸವನ್ನು ಹಾಗೂ ಸಸ್ಯಕ್ಷೇತ್ರಗಳಲ್ಲಿ ಸಸಿಗಳಿಗೆ ನೀರುಣಿಸುವ ಕೆಲಸಗಳನ್ನು ಅಗತ್ಯವೆನಿಸಿದಲ್ಲಿ ಇಲಾಖಾ ಮುಖಾಂತರ ಮಾಡಿ ಪೂರೈಸಲಾಗುವುದು. ಈ ರೀತಿ ಕೈಗೊಂಡ ಕೆಲಸಗಳನ್ನು ಹೊರತುಪಡಿಸಿ ಗುತ್ತಿಗೆದಾರರು ಉಳಿದ ಕೆಲಸಗಳನ್ನು ಕೈಗೊಳ್ಳಬೇಕಾಗುತ್ತದೆ. ಇಲಾಖಾ ಮುಖಾಂತರ ಕೈಗೊಳ್ಳಲಾದ ವೆಚ್ಚವನ್ನು ಇಲಾಖಾ ದರದಲ್ಲಿಯೇ ಪಾವತಿಗೆ ಕ್ರಮವಹಿಸಲಾಗುವುದು, ಉಳಿದಂತೆ ಟೆಂಡರ್ ದಾರರು ನಿರ್ವಹಿಸುವ ಕಾಮಗಾರಿಗೆ ವೆಚ್ಚವನ್ನು ಟೆಂಡರ್ ಅನುಮೋದಿತ ದರದಲ್ಲಿ ಭರಿಸಲಾಗುವುದು. ಸದರಿ ಅಂಶವನ್ನು ಗಮನದಲ್ಲಿಟ್ಟುಕೊಂಡು ಟೆಂಡರ್‌ದಾರರು ಟೆಂಡರ್‌ನಲ್ಲಿ ಭಾಗವಹಿಸುವುದು.**

19) ಪೂರ್ಣಗೊಂಡ ಕಾಮಗಾರಿಗಳಿಗೆ ಅನುದಾನದ ಲಭ್ಯತೆ ಅನುಸಾರ ಹಣ ಪಾವತಿಸಲಾಗುವುದು. ಭಾಗಶಃ ಮಾಡಿದ ಕಾಮಗಾರಿಗಳಿಗೆ ಬಿಲ್ಲುಗಳನ್ನು ಪಾವತಿಸಲಾಗುವುದಿಲ್ಲ. ಕಾಮಗಾರಿಗಳನ್ನು ವಲಯ

21) ಟೆಂಡರ್ ಪ್ರಕಟಣೆಯ ಯಾವುದೇ ನಿಯಮವನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆದು ಕೆಲಸ ಮಾಡಿಸುವ ಹಾಗೂ ಸದರಿ ಟೆಂಡರ್‌ನ್ನು ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ

15) ಟೆಂಡರ್‌ದಾರರು ಟೆಂಡರ್ ದಿನಾಂಕದಂದು ಅರಣ್ಯ ಗುತ್ತಿಗೆದಾರರಾಗಿ ಹೆಸರು ನೊಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸಿದ್ದಲ್ಲಿ, ಆ ದಿನವೇ ಅರಣ್ಯ ಗುತ್ತಿಗೆದಾರರನ್ನಾಗಿ ನೊಂದಾವಣೆ ಮಾಡಲಾಗುವುದಿಲ್ಲ.

20) ಟೆಂಡರ್ ಮಂಜೂರಾತಿಯ ಬಗ್ಗೆ ಮೇಲಾಧಿಕಾರಿಗಳಿಂದ ಆದೇಶ ಬಂದ ನಂತರ ತಿಳಿಸಲಾಗುವುದು. ಅಲ್ಲಿಯವರೆಗೆ 2ನೇ ಅತಿ ಕಡಿಮೆ ಟೆಂಡರ್ ದರ ನಮೂದಿಸಿರುವ ಗುತ್ತಿಗೆದಾರರ ಇ.ಎಂ.ಡಿ. ಹಣವನ್ನು ಹಿಂತಿರುಗಿಸಲಾಗುವುದಿಲ್ಲ. ಹಾಗೂ ಈ ಅವಧಿಯಲ್ಲಿ ಟೆಂಡರನ್ನು ವಾಪಸ್ಸು ಪಡೆಯಲು ಅವಕಾಶವಿರುವುದಿಲ್ಲ.

21) ಅತೀ ಕಡಿಮೆ ಒಂದೇ ದರವನ್ನು ಸೂಚಿಸಿರುವ ಟೆಂಡರ್ ಒಂದಕ್ಕಿಂತ ಹೆಚ್ಚು ಬಂದಲ್ಲಿ ಅದರಲ್ಲಿ ಒಂದು ಟೆಂಡರನ್ನು ಮಾತ್ರ ಒಪ್ಪಿಕೊಳ್ಳುವ ಅಧಿಕಾರ ಇಲಾಖೆಗೆ ಇರುತ್ತದೆ. ಅಲ್ಲದೇ ಅಂತಹ ಟೆಂಡರ್‌ದಾರರೊಂದಿಗೆ ರಾಜಿ ಒಪ್ಪಂದ ಮಾಡಲಾಗುವುದು. ಹೀಗೆ ರಾಜಿ ಒಪ್ಪಂದದಲ್ಲಿ ತೀರ್ಮಾನಿಸಿದವರನ್ನು ಒಪ್ಪಿಕೊಳ್ಳಬೇಕಾಗುತ್ತದೆ

22) ಗುತ್ತಿಗೆದಾರರು ಗುತ್ತಿಗೆಯನ್ನು ಅಥವಾ ಯಾವುದೇ ಭಾಗವನ್ನು ಇತರರಿಗೆ ಉಪ ಗುತ್ತಿಗೆ ನೀಡುವಂತಿಲ್ಲ. ಹಾಗೂ ವರ್ಗಾಯಿಸುವಂತಿಲ್ಲ.

23) ಗುತ್ತಿಗೆ ಅವಧಿ ಮುಗಿದ ನಂತರ ಹಾಗೂ ಕಾಮಗಾರಿಗಳು ಪೂರ್ಣಗೊಂಡ ನಂತರ ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಕಾಮಗಾರಿ ತೃಪ್ತಿಕರವಾಗಿ ಪೂರ್ಣಗೊಂಡಿರುವ

24) ಕಾಮಗಾರಿಯು ಪ್ರಗತಿಯಲ್ಲಿರುವಾಗ ಯಾವುದೇ ಕೂಲಿಯಾಳುಗಳು ದೈಹಿಕವಾಗಿ ಗಾಯಗೊಂಡಲ್ಲಿ ಕಾರ್ಮಿಕರ ಶುಶ್ರೂಷೆಗಾಗಿ ತಗಲುವ ವೆಚ್ಚ ಅಥವಾ ಮರಣ ಹೊಂದಿದಲ್ಲಿ ಅಂತಹ ಪ್ರಕರಣಗಳಿಗೆ ಪರಿಹಾರ ಧನ ನೀಡುವ ಸಂಪೂರ್ಣ ಹೊಣೆ ಗುತ್ತಿಗೆದಾರರದೇ ಆಗಿರುತ್ತದೆ. ಇಂಥಹ ಪ್ರಕರಣಗಳಿಗೆ ಇಲಾಖೆಯು ಹೊಣೆ ಇರುವುದಿಲ್ಲ.

25) ನಿಗಧಿತ ಕಾಲಾವಧಿಯೊಳಗಾಗಿ ಗುತ್ತಿಗೆದಾರರು ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಯಾವುದೇ ಕಾರಣಕ್ಕೂ ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲ

26) ಈ ಟೆಂಡರ್ ಪ್ರಕಟಣೆಯನ್ನು 2019–20ನೇ ಸಾಲಿಗೆ ಅನುದಾನ ಹಾಗೂ ವಾರ್ಷಿಕ ಕ್ರಿಯಾ ಯೋಜನೆಗಳ ಮಂಜೂರಾತಿ ನಿರೀಕ್ಷಿಸಿ ಕರೆಯಲಾಗಿದ್ದು, ಸದರಿ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆಗೆ ಅನುಗುಣವಾಗಿ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ನೀಡಲಾಗುವುದು.

27) ಗುತ್ತಿಗೆದಾರರ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರು ಅರಣ್ಯ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರ ವಿರುದ್ದ ಹಾಗೂ ಗುತ್ತಿಗೆದಾರರ ವಿರುದ್ದ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

28) ಗುತ್ತಿಗೆದಾರನು ಕೂಲಿ ಕಾರ್ಮಿಕರ ನಿಯೋಜನೆಗೆ ಸಂಬಂಧಿಸಿದಂತೆ ಕೆಳಕಂಡ ಶಾಸನಗಳಿಗೆ ಬದ್ಧನಾಗಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. i) Workmen Compensation Act 1923, ii) Payment of wages Act 1935, iii) Minimum wage Act 1948, iv) Child labour Act 1938
v) Employer's liability Act 1938, vi) Other Acts of Central & State that may applicable time to time.

29) ಟೆಂಡರ್ ಒಪ್ಪಂದ/ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ Arbitration ಕೇಂದ್ರ (ದೇಶಿಯ, ಅಂತರ್‌ದೇಶಿಯ), ನಿಯಮಗಳು 2012 ರಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಲು ಒಪ್ಪಿಕೊಳ್ಳಬೇಕಾಗುತ್ತದೆ.

30) ಟೆಂಡರ್ ಪ್ರಕಟಣೆಯ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆದು ಕೆಲಸ ಮಾಡಿಸುವ, ಯಾವುದೇ ಕಾರಣವನ್ನು ನೀಡದೆ ಟೆಂಡರನ್ನು ರದ್ದು ಪಡಿಸುವ ಅಧಿಕಾರವು ಈ ಕೆಳ ಸಹಿದಾರರಿಗಿರುತ್ತದೆ.

31) ಈ ಕ್ರಮದಿಂದ ಇಲಾಖೆಗೆ ಆಗಬಹುದಾದ ನಷ್ಟವನ್ನು ಮೂಲ ವಿಜೇತ ಟೆಂಡರುದಾರರು ಕಟ್ಟಿ ಕೊಡಲು ವಿಫಲರಾದರೆ ಸದರಿ ಮೊತ್ತವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 109ರಂತೆ ಭೂಕಂದಾಯ ಬಾಕಿ ರೂಪದಲ್ಲಿ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

32) ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಆದೇಶದ ಬಗ್ಗೆ ತೃಪ್ತಿ ಇಲ್ಲವಾದರೆ ಮೈಸೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅವರು ಕೊಡುವ ತೀರ್ಮ ಅಂತಿಮವಾದುದು.

33) ಟೆಂಡರನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಸಹಿ ಮಾಡಿರುವವರಿಗೆ ಅಥವಾ ಮೇಲಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ

34) ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯಲ್ಲಿ ಅಥವಾ ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಸಂಪರ್ಕ ಮಾಡಬೇಕಾದ ದೂರವಾಣಿ ಸಂಖ್ಯೆ:08232–220630.

35) ಸಸಿಗಳನ್ನು ಬೆಳೆಸುವ ಕಾಮಗಾರಿ ಋತುಮಾನ ಆಧಾರಿತ ಕಾಮಗಾರಿಗಳಾಗಿರುವುದರಿಂದ ಸಸಿಗಳನ್ನು ಬೆಳೆಸುವ ಭೌತಿಕ ಹಾಗು ಆರ್ಥಿಕ ಗುರಿ ನಿರೀಕ್ಷಿಸಿ ಟೆಂಡರ್ ಕರೆಯಲಾಗಿರುತ್ತದೆ. ಮೇಲಾಧಿಕಾರಿಗಳಿಂದ ಅನುದಾನ ಹಂಚಿಕೆಯಾಗುವ ನಿರೀಕ್ಷೆಯ ಮೇರೆಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡರೂ ಸಹಿತ ಮೇಲಾಧಿಕಾರಿಗಳಿಂದ ಅನುದಾನ ಹಂಚಿಕೆಯಾದ ನಂತರ ಕರಾರು ನಾಮೆಯನ್ನು ಪೂರ್ಣಗೊಳಿಸಿ ಕಾರ್ಯಾದೇಶ ನೀಡಲಾಗುವುದು. ಟೆಂಡರ್‌ನಲ್ಲಿ ಭಾಗವಹಿಸುವವರು ಇದಕ್ಕೆ ಬದ್ಧರಾಗಿರಬೇಕು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಂಡ್ಯ ವಿಭಾಗ, ಮಂಡ್ಯ